

# ನಾಗರ ಕೆಸದ ಗಿಡ

■ ಚಿತ್ರ– ಬರಹ: **ಲಾವಣ್ಯ ಎನ್.ಕೆ.**

ವಿಪ್ ಕಾರ್ಡ್ ಲಿಲ್ಲಿ ಒಂದು ಪುಟ್ಟ ಗಿಡ. ನೋಡಲು ನಾಗರ ಹೆಡೆಯಂತೆ ಕಾಣುವ ಈ ಗಿಡ ಸುಮಾರು ಮೂರರಿಂದ ನಾಲ್ಕು ಅಡಿ ಎತ್ತರ ಬೆಳೆಯುತ್ತದೆ. ಗಿಡದ ಎಲೆಯು ವ್ಯವಸ್ಥಿತವಾಗಿ ಜೋಡಿಸಿ ಇಟ್ಟ ಹಾಗಿರುತ್ತದೆ. ಮಧ್ಯದಲ್ಲಿ ಹೂವು.

ಹೂವು ನಾಗರ ಹೆಡೆಯಂತಿದ್ದು, ಹಸಿರು ಬಣ್ಣದ್ದು. ಮೂವತ್ತು ಸೆಂಟಿಮೀಟರ್ ಉದ್ದ ಬೆಳೆಯುತ್ತದೆ. ಹೆಡೆಯ ಒಳಗಿನಿಂದ ನೇರಳೆ ಬಣ್ಣದ ಕಡ್ಡಿಯಂತಹ ಎಳೆಯೊಂದನ್ನು ಕಾಣಬಹುದು. ಭಾರತದಲ್ಲಿ ಅತಿ ವಿರಳ ಶಬ್ರ್ಸ್‌ಗಳಲ್ಲಿ ವಿಪ್ ಕಾರ್ಡ್ ಲಿಲ್ಲಿಯೂ ಒಂದು. ಪಶ್ಚಿಮ ಚೀನಾ, ಮ್ಯಾನ್ಮಾರ್, ಹಿಮಾಲಯ ಮತ್ತು ದಕ್ಷಿಣ ಭಾರತದಲ್ಲಿ ಕಂಡುಬರುತ್ತದೆ.

ನೋಡಲು ಕೀಟಾಹಾರಿ ಸಸ್ಯದಂತೆ ಕಂಡರೂ ಇದು ಸುವರ್ಣ ಗೆಡ್ಡೆ ಸಸ್ಯದ ವಂಶಕ್ಕೆ ಸೇರಿದ್ದು. ಅರೆಸೆಮಾ ಟೋರ್ಟಾಯಾಸಮ್ ಇದರ ವೈಜ್ಞಾನಿಕ ಹೆಸರು. ಅರಾಸಿಯಲ್ ವಂಶಕ್ಕೆ ಸೇರಿದೆ. ಕಾಟು ಸೆನಾಯಿ, ಅಮು ಮಣಿ ಗಿಡ, ನಾಗರ ಹೆಡೆ ಗಿಡ ಎಂದು ಪ್ರದೇಶಕ್ಕೆ ಅನುಗುಣವಾಗಿ ಸ್ಥಳೀಯ ಹೆಸರುಗಳಿವೆ. ನಾಗರ ಕೆಸ ಎನ್ನುವ ಹೆಸರೇ ಹೆಚ್ಚು ಪ್ರಚಲಿತ.

ಎಲ್ಲಿ ಈ ಗಿಡಗಳು ಹೆಚ್ಚಿರುತ್ತವೋ ಅಲ್ಲಿ ಹಾವುಗಳ ಇರುವಿಕೆಯೂ ಹೆಚ್ಚು ಎಂದು ಜನರು ನಂಬುತ್ತಾರೆ. ಈ ಗಿಡ ಔಷಧೀಯ ಗುಣಗಳನ್ನು ಹೊಂದಿದ್ದು ಹಾವು ಕಚ್ಚಿದಾಗ ಔಷಧಿಯಾಗಿ ಬಳಸುತ್ತಾರೆ. ರಕ್ತ ಶುದ್ಧಿಗೆ ಇದು ಸಹಾಯಕ ಎನ್ನುತ್ತಾರೆ. ದನಗಳ ಗಾಯ ವಾಸಿಗೂ ಇದನ್ನು ಬಳಸುತ್ತಾರೆ. ●



